ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಇದೇ ರೀತಿಯಲ್ಲಿ ನಮ್ಮ ತಾಲ್ಲೂಕಿನಲ್ಲಿ ಕೆಲವು ಕೆರೆಗಳ ಕೆಲಸ ವಿಳಂಬವಾಗುತ್ತಿದೆ ಮತ್ತು ಇದರಿಂದ ಸಾರ್ವಜನಿಕರಿಗೆ ಉಪಯೋಗವಾಗುತ್ತಿಲ್ಲ. ಇವುಗಳ ಕೆಲಸ ತ್ವರಿತವಾಗಿ ಪೂರ್ಣಮಾಡಲು ಪ್ರಯತ್ನ ಮಾಡಬೇಕು. ಜಮೀನುದಾರರು ತಮ್ಮ ಜಮೀನನ್ನು ಬಿಟ್ಟು ಕೊಡಲು ತಕರಾರು ಮಾಡುತ್ತಾರೆ ಎಂದು ಹೇಳುವದು ಸರಿಯಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಸರಿಯಲ್ಲವೆಂದು ಹೇಳುವದಕ್ಕೆ ಆಧಾರ ವೇನೋ ಗೊತ್ತಿಲ್ಲ. ಭೂಮಿ ಕೊಡದಿದ್ದರೆ ಆಕ್ರಮಣ ಮಾಡಿ ಛಾನಲ್ ಮಾಡುವದಕ್ಕಾಗುವದಿಲ್ಲ. ಭೂಮಿ ಸಿಕ್ಕಿದರೆ ಕೆಲಸ ನಿಲಿಸಬೇಕೆಂಬ ಆಶಯವಿಲ್ಲ.

LIFT IRRIGATION AT RAMANAGULI

926. Smt. RADHA BHAT (Ankola).—Will the Minister for Public Works and Electricity be pleased to state :—

(*a*) Whether the question of providing irrigational facilities to Adalur, Vasara Kudragi, Agasur and other villages through Lift Irrigation at Ramanaguli of Ankola Taluk of N.K.District is under the consideration of the Government;

(*b*) if so, the action proposed to be taken by the Government in this behalf?

Sri H. M. CHANNABASAPPA (Minister for Public Works and Electricity).—

(*a*) and (*b*) After the preliminary investigation as this scheme was found to be technically not feasible the same is dropped the present.

ಶ್ರೀಮತಿ ರಾಧಾ ಭಟ್.—ಈ ನೀರಾವರಿ ಯೋಜನೆಯ ಬಗ್ಗೆ ತಾಂತ್ರಿಕ ಪರಿಶೀಲನೆ ಯಾವಾಗ ಮಾಡಲಾಯ್ತು? ತಾಂತ್ರಿಕವಾಗಿ ಇದು ಯೋಗ್ಯವಲ್ಲ ಎಂದು ಹೇಳಲು ಕಾರಣವೇನು?

†ಶ್ರೀ ಎಚ್. ಎಂ. ಚನ್ನಬಸಪ್ಪ.—ತಾಂತ್ರಿಕವಾಗಿ ಯೋಗ್ಯವಲ್ಲ ಎಂಬುದೇ ಕಾರಣ.

ಶ್ರೀಮತಿ ರಾಧಾ ಭಟ್.—ರಾಮನಗುಳಿ ಭಾಗದಲ್ಲಿ ನೀರಾವರಿಯ ಅವಶ್ಯಕತೆ ಬಹಳವಾಗಿರುವದರಿಂದ ಲಿಫ್ಟ್ ಇರಿಗೇಶನ್ ಮುಂತಾದ ಯೋಜನೆಗಳು ಸಾಧ್ಯವಿದ್ದರೆ ಬೇರೆ ಯಾವುದಾದರೂ ಯೋಜನೆ ತೆಗೆದುಕೊಳ್ಳಲು ಸರಕಾರ ಯೋಚನೆ ಮಾಡುವುದೇ? ಇಂಥ ಪರಿಶೀಲನೆ ಏನಾದರೂ ನಡೆದಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಲ್ಲಿ ಸಾಕಷ್ಟು ನೀರು ಸಿಕ್ಕದಿರುವದರಿಂದ ಮಾನ್ಯ ಸದಸ್ಯರು ಹೇಳಿರುವ ಯೋಜನೆ ತೆಗೆದುಕೊಳ್ಳಲಿಕ್ಕಾಗುವದಿಲ್ಲ. ಬೇರೆ ಲಿಫ್ಟ್ ಇರಿಗೇಷನ್ ಯೊಜನೆ ಬಗ್ಗೆ ಅಲ್ಲಿ ಪರಿಶೀಲಿಸಿಲ್ಲ. ಅದರ ಬಗ್ಗೆ ಕಳಕಳಿಯಿಂದ ಪ್ರಯತ್ನ ಮಾಡಲಾಗುವದು.

ಶ್ರೀಮತಿ ರಾಧಾ ಭಟ್.—ಈ ಭಾಗದಲ್ಲಿ ಆದಷ್ಟು ಬೇಗ ನೀರಾವರಿ ಯೋಜನೆ ತೆಗೆದುಕೊಳ್ಳಲು ಪರಿಶೀಲಿಸುವಿರಾ? ಹಾಗೆ ಪರಿಶೀಲಿಸಲು ಎಷ್ಟು ಕಾಲಾವ ಕಾಶ ಬೇಕು? ಅಲ್ಲಿ ಇದರ ಬಗ್ಗೆ ಜನರ ಭಾರೀ ಬೇಡಿಕೆಯಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಬೇಡಿಕೆ ಇಲ್ಲ, ಬೇಡಿಕೆ ಬಂದರೆ ಪರಿಶೀಲಿ ಸುತ್ತೇವೆ.

ಅಧ್ಯಕ್ಷರು.—ಈಗ ಪ್ರಶ್ನೆ ನಂ. ೯೪೧, ಆದರೆ ಮಂತ್ರಿಗಳೂ ಬಂದಿಲ್ಲ, ಅವ ರಿಂದ ಕಾಗದಾನೂ ಬಂದಿಲ್ಲ. This has been happening many a time.

Sri H. M. CHANNABASAPPA.— I am really very sorry. He might be on his way. It may be held over and taken after the other Questions are over, it can be taken up later.

MADAM SPEAKER.– Will this privilege be given to the Members also and their questions kindly held over till they come ?

(No answer)

FINANCIAL ASSISTANCE TO CHAMUNDI CHEMICAL AND FERTILISERS LTD., MUNIRABAD

1022. Sri M. VIRUPAKSHAPPA (Koppal).— Will the Minister for Industries be pleased to state:—whether the Government is considering to give financial assistance to Chamundi Chemical and Fertilisers Ltd., Munirabad, in view of its week financial position to start the factory again in the near future ?

Sri S. M. KRISHNA (Minister for Industries).—

No.

ಶ್ರೀ ಎಂ. ವಿರೂಪಾಕ್ಷಪ್ಪ.— ಈ ಗಿರಣಿಯ ಕೂಲಿಕಾರರ ಕಷ್ಟವನ್ನು ಗಮ ನಿಸಿ ಈ ಕಾರ್ಖಾನೆಯನ್ನು ಪುನ: ಪ್ರಾರಂಭಿಸಲು ಯೋಜನೆಮಾಡುವಿರಾ ?